ರಾಜ್ಯಗಳು ಸ್ಕೂಟರ್ ಇಂಡಿಯಾ ಅವರು ಇಂಜಿನ್ ಪೂರೈಕೆ ಮಾಡುತ್ತಾರೆಂಬ ಭರವಸೆಯಿಂದ ಪ್ರಯತ್ನ ಮಾಡಿದರೆ ಅದು ಪೂರೈಕೆಯಾಗಲಿಲ್ಲ. ಅದೇ ಪ್ರಬಲವಾದಂಥ ಕಾರಣ. ಆದರಿಂದ ನಷ್ಟವಾಗಿದೆ. ನಮ್ಮ ರಾಜ್ಯದಲ್ಲಿ ಮತ್ತು ಆಂಧ್ರಪ್ರದೇಶದಲ್ಲಿ ಸ್ವಲ್ಪ ಸ್ವಲ್ಪ ಪ್ರೊಡಕ್ಷನ್ ಮಾಡಿದ್ದಾರೆ.

ಈ ಕರ್ನಾಟಕ ಸ್ಕೂಟರ್ಸ್ ಲಿಮಿಟೆಡ್ ಕಾರ್ಖಾನೆಯನ್ನು ಒಂದು ಪ್ರಬಲವಾದ ತಳಹದಿಯ ಮೇಲೆ ಕಟ್ಟಬೇಕು, ಇದು ನಷ್ಟ ಹೊಂದಬಾರದು ಎಂದು ಬಿ.ಎಸ್.ಎ. ಕಂಪೆನಿ ಸಹಭಾಗಿತ್ವದಲ್ಲಿ ಒಪ್ಪಂದ ಮಾಡಿಕೊಂಡು ತಾರೀಖು ೩೦-೬-೧೯೮೦ರಿಂದ ಇದನ್ನು ಸ್ಥಾಪನೆ ಮಾಡಿದ್ದೇವೆ. ಈ ಮಿನಿ ಮೋಟಾರ್ ಸೈಕಲ್ ತಯಾರಾದ ಮೇಲೆ ಎಕ್ಸ್ ಫ್ಯಾಕ್ಟರಿ ರೇಟ್ ೮೫೦೦ ರೂ. ಆಗುತ್ತದೆ. ಅದು ಹೊರಗಡೆ ಬಂದರೆ ೧೦,೦೦೦ ರೂ. ಆಗುತ್ತದೆ. ೧೯೮೨ರ ಮಾರ್ಚಿ ತಿಂಗಳಿಂದ ಇದರ ಕಮರ್ಷಿಯಲ್ ಪ್ರೊಡಕ್ಷನ್ ಶುರುವಾಗುತ್ತದೆ. ಇದುವರೆಗೂ ಈ ಕಾರ್ಖಾನೆ ಏನೊಂದು ತೊಂದರೆಗೆ ಸಿಕ್ಕಿಹಾಕಿಕೊಂಡಿತ್ತು ಅದನ್ನು ಇನ್ನು ಮುಂದಾದರೂ ಹೋಗಲಾಡಿಸಿ ಲಾಭದಾಯಕವಾಗಿ ನಡೆಸಬೇಕೆಂದು ಉದ್ದೇಶಿಸಿದ್ದೇವೆ. ೧೯೮೨ರ ಮಾರ್ಚಿಯಿಂದ ಈ ಮಿನಿ ಮೋಟಾರ್ ಸೈಕಲ್ ಕಾರ್ಖಾನೆಯಲ್ಲಿ ಒಂದು ವರ್ಷಕ್ಕೆ ೩೨ ಸಾವಿರ ಸ್ಕೂಟರ್‌ಗಳನ್ನು ತಯಾರು ಮಾಡುವಂತೆ ಗುರಿ ಇಟ್ಟುಕೊಂಡಿದ್ದೇವೆ.

ಶ್ರೀ ಡಿ. ಟಿ. ರಾಮು. — ಸ್ವಾಮಿ. ತಮ್ಮ ಉತ್ತರದಲ್ಲಿ ಅಂದರೆ (ಉ)ನ ಅನೆ ಕಾರ್ಖಾನೆಲ್ಲಿ ..ಕೃಷಿ ಕಾರ್ಮಿಕರೇ ಹೆಚ್ಚಿಗಿರುವ ಗ್ರಾಮಾಂತರ ಪ್ರದೇಶದಲ್ಲಿ ಈ ಕಾರ್ಖಾನೆ ಇರುವುದರಿಂದ ತಾಂತ್ರಿಕ ತರಬೇತಿ ಹೊಂದಿದ ಕಾರ್ಮಿಕರು ದೊರಕದಿರುವುದರಿಂದ'' ಎಂದು ಹೇಳಿದ್ದೀರಿ. ಅಂದರೆ, ಕೇವಲ ಕೃಷಿ ಕಾರ್ಮಿಕರೇ ಇರತಕ್ಕ ಸ್ಥಳಗಳಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸುವುದರಿಂದ ನಷ್ಟವಾಗುತ್ತದೆ ಅಂದಹಾಗೆ ಆಯಿತು. ಇದರ ಜೊತೆಗೆ ತಾಂತ್ರಿಕ ತರಬೇತಿ ಹೊಂದಿದ ಕಾರ್ಮಿಕರು ಸಿಕ್ಕುತ್ತಿಲ್ಲ ಅಂತ ನಾವು ಹೇಳುವುದಾದರೆ, ತಾಂತ್ರಿಕ ತರಬೇತಿ ಹೊಂದಿದ ಕಾರ್ಮಿಕರಿಗೆ ಎಷ್ಟುಸಾರಿ ಸಂದರ್ಶನಕ್ಕೆ ಕರೆ ಕಳುಹಿಸಿದ್ದೀರಿ? ಮತ್ತು ಬಂದಿದ್ದವರ ಪೈಕಿ ಎಷ್ಟು ಜನರನ್ನು ನಾವು ಆಯ್ಕೆ ಮಾಡಿಕೊಂಡಿದ್ದೀರಿ ಎಂಬುದನ್ನು ಹೇಳುತ್ತೀರಾ?

ಇನ್ನು ವರಡನೆಯದಾಗಿ ಹೇಳುವುದಾದರೆ. ಈ ಕಾರ್ಖಾನೆಗೆ ಬೇಕಾದಂಥ ಕಚ್ಚಾವಸ್ತುಗಳಾದಂಥ ಉಕ್ಕು ಲಾರಿಗಟ್ಟಲೆ ಬರುತ್ತವೆ. ಆದರೆ ಅದನ್ನು ಕಳ್ಳತನದಲ್ಲಿ ಸಾಗಿಸಿ ಕೋಟಿಗಟ್ಟಲೆ ಅವ್ಯವಹಾರವನ್ನು ನಡೆಸಿ ಮುಂದೆ ಇದು ನಷ್ಟವನ್ನು ಅನುಭವಿಸುತ್ತದೆಂದು ದೂರದೃಷ್ಟಿಯಿಂದ ಅವರು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಈ ರೀತಿ ಸೂಚನೆಗಳನ್ನು ಕೊಟ್ಟು ಈ ಕಾರ್ಖಾನೆ ಮುಳುಗುವಂತೆ ಮಾಡಿದ್ದಾರೆ. ಇದಕ್ಕೆ ತಾವು ಏನು ಹೇಳುತ್ತೀರಿ?

ಶ್ರೀ ಎಂ. ವೀರಪ್ಪಮೊಯಿಲಿ.— ಈ ಕಾರ್ಖಾನೆ ಮುಳುಗದಂತೆ ನಾವು ಕ್ರಮವನ್ನು ತೆಗೆದು ಕೊಂಡಿದ್ದೇವೆ. ತಾವು ಹೇಳಿರುವಂತೆ ಸ್ಟೀಲ್ ವಿಚಾರದಲ್ಲಿ ಏನಾದರೂ ಅವ್ಯವಹಾರ ನಡೆದಿದ್ದರೆ ಅದನ್ನು ತನಿಖೆ ಮಾಡಿಸುತ್ತೇವೆ. ಸಾಮಾನ್ಯವಾಗಿ ಹಿಂದುಳಿದ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಹೋದರೆ ಸ್ಕಿಲ್ಡ್ ಲೇಬರರ್ಸ್ ಸಿಕ್ಕುವುದಿಲ್ಲ. ಅವರು ಕೆಲಸಕ್ಕೆ ಹೋಗುವುದಿಲ್ಲ. ಆದರೆ ಇದು ಪ್ರಮುಖ ಕಾರಣವಲ್ಲ. ಇದಕ್ಕೆ ನಿಜವಾದ ಕಾರಣ ಎಂದರೆ ಈ ಸ್ಕೂಟರ್‌ಗೆ ಬೇಕಾದ ಎಂಜಿನ್‌ಗಳನ್ನು ಆ ಕಾರ್ಖಾನೆಯವರು ಕೊಡದೇ ಇರುವುದು.

288 SRI A. LAKSHMISAGAR (Chickpet)— Will the Minister for Public Works be pleased to state.—

(a) what is the total expenditure incurred on fuel, repairs and other items of maintenance and also the staff in charge of the Helicopter and official Car, used by the Hon'ble Chief Minister from January 1980 till 31st December 1980.

(b) Break up of figures in respect of Car and Helicopter be furnished ?

SRI KAGODU THIMMAPPA (Minister for Public Works).—

(a) The total expenditure incurred is Rs. 1,87,028-32.

(b) The break up figures are as under :

I. Helicopter.

1.	Fuel	Rs. 00,97,766-00
2.	Maintenance	Rs. 02,52,610-00
3.	Pilots' salary	Rs. 00,58,865-00
4.	Miscellaneous	Rs. 00,56,617-00
5.	Insurance	Rs. 08,78,830-00
		Rs. 13,44,688-00

II. Car

1.	Fuel	Rs.	8,733-87
2.	Maintenance	Rs.	28,273-30
3.	Salary and allowances to the Driver	Rs.	5,109-15
4.	Miscellaneous	Rs.	224-00
		Rs.	42,340-32
	Total I and II	Rs.	13,87,028-32

SRI A. LAKSHMISAGAR.—Sir. May I ask the hon'ble Minister to give figures upto 31-12-1982 ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ನಾವು ಉತ್ತರಗಳನ್ನು ಒದಗಿಸಿದ್ದೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ನಿಮ್ಮ ಅಂಕಿಅಂಶಗಳು ಡಿಸೆಂಬರ್ ತಿಂಗಳವರೆಗೂ ಇವೆಯೇ ?

ಶ್ರೀ ಕಾಗೋಡು ತಿಮ್ಮಪ್ಪ.—ನೀವು ಕೇಳಿರುವ ಪ್ರಶ್ನೆಗೆ ಸೂಕ್ತ ಉತ್ತರಗಳನ್ನು ಕೊಟ್ಟಿದ್ದೇವೆ.

SRI A. LAKSHMISAGAR.—Are there any rules govering the use of the Helicopter, and if so, what are those rules ?

ಶ್ರೀ ಕಾಗೋಡು ತಿಮ್ಮಪ್ಪ.—ಕರ್ನಾಟಕ ಮಿನಿಸ್ಟರ್ಸ್ ಸ್ಯಾಲರೀಸ್ ಅಂಡ್ ಅಲೋಯನ್ಸಸ್ ಆಕ್ಟ್‌ನಲ್ಲಿ ಇದೆ.

ಅಧ್ಯಕ್ಷರು.—ಟ್ರಾನ್ಸ್‌ಪೋರ್ಟ್ ರೂಲ್ಸ್‌ನಲ್ಲಿ ಇದನ್ನು ಫ್ರೇಂ ಮಾಡಿದ್ದಾರೆಯೇ ?

ಶ್ರೀ ಕಾಗೋಡು ತಿಮ್ಮಪ್ಪ.—ಹೆಲಿಕ್ಯಾಪ್ಟರ್ ರೂಲ್ಸ್‌ನಲ್ಲಿ ಫ್ರೇಂಮಾಡಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಯಾವ ರೂಲ್ಸ್‌ನಲ್ಲಿ ಫ್ರೇಂ ಮಾಡಿದ್ದಾರೆ ಎಂಬುದನ್ನು ಹೇಳಿ.

SRI KAGODU THIMMAPPA.—Sir, sub-section (1) of Section (5) of the Karnataka Ministers' Salaries and Allowance Act.....

SRI A. LAKSHMI SAGAR.—Sir, my question is very simple and straight. I want to know from the Government if there are any rules and the manner in which the Helicopter is to be used. My information is that there are certain rules governing the use of the Helicopter.

MR. SPEAKER.—If you know the rules you should not put the question.

SRI A. LAKSHMISAGAR.—Sir, I want to know officially.

MR. SPEAKER.—It is not like that Mr. Sagar.

SRI A. LAKSHMI SAGAR.—All right, Sir, I refrain from putting that question. But I want to know from the Government the persons who are entitled to make use of the Helicopter. Besides the Chief Minister whether private persons are also entitled to make use of that Helicopter ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸಭಾಪತಿಯವರೆ, ಬಹುಶಃ ನಾವು ಮಾಡಿರತಕ್ಕ ರೂಲ್ಸ್‌ನ್ನು ವಯೊಲೆಟ್ ಮಾಡಿಲ್ಲವೆನ್ನಿಸುತ್ತದೆ. If there are any instances where we have violated any rules you are at liberty to bring them to my notice.

ಅಧ್ಯಕ್ಷರು.—ಹೆಲಿಕಾಪ್ಟರ್‌ನಲ್ಲಿ ಮಾನ್ಯ ಮುಖ್ಯ ಮಂತ್ರಿಯವರೇ ಅಲ್ಲದೇ ಬೇರೆಯವರೂ ಆದರಲ್ಲಿ ಕೂತುಕೊಂಡು ಹೋಗುವುದಕ್ಕೆ ಅವಕಾಶ ಇದೆಯೇ ? ಬೇರೆಯವರೂ ಅದನ್ನು ಬಳಸಿಕೊಳ್ಳುವುದಕ್ಕೆ ಅವಕಾಶ ಇದೆಯೇ ? ಎಂಬುದು ಅವರ ಪ್ರಶ್ನೆ.

ಶ್ರೀ ಕಾಗೋಡು ತಿಮ್ಮಪ್ಪ.—ಅದನ್ನು ಪರಿಶೀಲನೆ ಮಾಡಬೇಕು. ಆದರೆ, ಇದಕ್ಕೆಲ್ಲಾ ಕೆಲವು ಗೈಡ್‌ಲೈನ್ಸ್ ಇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಪತಿಯವರೆ, ಹಿಂದೆ ನಾನೂ ಕೂಡ ಈ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದೆ. ಅಂದರೆ ಜನವರಿ ೧೯೮೧ನೇ ಇಸವಿಯಲ್ಲಿ ಪ್ರಶ್ನೆಯನ್ನು ಕೇಳಿ ಮಾನ್ಯ ಮುಖ್ಯ ಮಂತ್ರಿಯವರು ಉಪಯೋಗ ಮಾಡಿದಂಥ ಹೆಲಿಕಾಪ್ಟರ್ ಬಗ್ಗೆ ಏನಾದರೂ ರೂಲ್ಸ್ ಇವೆಯೆ ? ಇದುವರೆಗೂ ಅದಕ್ಕಾಗಿ ಮಾಡಿರತಕ್ಕ ಒಟ್ಟು ವೆಚ್ಚ ಎಷ್ಟು ಎಂದು ಮುಂತಾಗಿ.....

ಅಧ್ಯಕ್ಷರು.—ನೀವು ಕೇಳಿದ್ದುದು ಡಿಸೆಂಬರ್ ೧೯೮೦ರವರೆಗೆ. ಆದು ಹಳೆಯ ಪ್ರಶ್ನೆಯಾಯಿತು, ಅದನ್ನು ಬಿಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಪತಿಯವರೆ, ಇದುವರೆಗೂ ಮಾನ್ಯ ಮುಖ್ಯ ಮಂತ್ರಿಯವರು ರಾಜ್ಯದ ಯಾವ ಯಾವ ಸ್ಥಳಗಳಿಗೆ ಹೆಲಿಕಾಪ್ಟರ್‌ನಲ್ಲಿ ಹೋಗಿದ್ದಾರೆ. ಅದರಲ್ಲಿ ಸರ್ಕಾರದ ಕೆಲಸಗಳು ಎಷ್ಟು ಎಂಬುದನ್ನು ಕೇಳಿದ್ದಾರೆ. ನಿಮ್ಮ ರೂಲ್ಸ್‌ನಲ್ಲಿ ಏನು ಹೇಳಿದ್ದೀರಿ, ಅದು ಹೆಲಿಕಾಪ್ಟರ್‌ಗೆ ಅಪ್ಲೈ ಆಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಯವರಾಗಲಿ, ಕ್ಯಾಬಿನೆಟ್ ಮಂತ್ರಿಗಳಾಗಲಿ, ಅಥವಾ ಇತರೇ ಮಂತ್ರಿಗಳಾಗಲಿ, ಇಲ್ಲವೇ ವಿರೋಧಪಕ್ಷದ ನಾಯಕರಾಗಲಿ ಕಾರನ್ನು ಉಪಯೋಗಿಸುವುದಕ್ಕೆ ರೂಲ್ಸ್‌ನಲ್ಲಿ ಇದೆ. ಟ್ರೈನ್‌ನಲ್ಲಿ ಹೋಗುವುದಕ್ಕೆ ರೂಲ್ಸ್‌ನಲ್ಲಿ ಇದೆ. ಆದರೆ ಹೆಲಿಕಾಪ್ಟರ್‌ನಲ್ಲಿ ಹೋಗುವುದಕ್ಕೆ ಅಪ್ಲೈ ಆಗುವುದಿಲ್ಲ. ಮಿನಿಸ್ಟರ್ಸ್ ಸ್ಯಾಲರೀಸ್ ಅಂಡ್ ಅಲೋಯನ್ಸ್‌ಸ್ ಆಕ್ಟ್‌ನಲ್ಲಿ ಈ ಹೆಲಿಕಾಪ್ಟರ್ ಉಪಯೋಗಿಸುವ ಬಗ್ಗೆ ರೂಲ್ಸ್ ಇಲ್ಲ. ಆದರೆ ಖರ್ಚುಮಾತ್ರ ಮಾಡುತ್ತಿದ್ದೀರಿ.

ಮಾನ್ಯ ಮುಖ್ಯ ಮಂತ್ರಿಯವರು ಸರ್ಕಾರೀ ಕೆಲಸಕೋಸ್ಕರ ಹೆಲಿಕಾಪ್ಟರ್‌ನ್ನು ಉಪಯೋಗಿಸಿದ್ದಾರೋ ? ಸ್ವಂತ ಕೆಲಸಕೋಸ್ಕರ ಉಪಯೋಗಿಸಿದ್ದಾರೋ ಎಂಬುದನ್ನು ಹೇಳಬೇಕು. ಏಕೆಂದರೆ, ಉದಾಹರಣೆಗೆ ಹೇಳುವುದಾದರೆ ಹೊನ್ನೆ ಮಾನ್ಯ ಮುಖ್ಯ ಮಂತ್ರಿಯವರು ತಿರುಪತಿ ತಿಮ್ಮಪ್ಪನ ದರ್ಶನಕ್ಕೆ ಹೆಲಿಕಾಪ್ಟರ್‌ನಲ್ಲಿ ಹೋಗಿದ್ದರು. ಅದು ಸರ್ಕಾರದ ಕೆಲಸವೋ ಅಥವಾ ಅವರ ಸ್ವಂತ ಕೆಲಸವೋ ? ಅವರು ಅಲ್ಲಿಗೆ ಹೋಗಿ ಬಂದಿದ್ದಕ್ಕೆ ವೆಚ್ಚವಾದ ಹಣವನ್ನು ಮುಖ್ಯ ಮಂತ್ರಿಯವರು ಕೊಟ್ಟಿದ್ದಾರೋ ? ಅಥವಾ ಸರ್ಕಾರದಿಂದ ಕೊಟ್ಟಿದ್ದಾರೋ ? ಎಂಬುದನ್ನು ಹೇಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಕೇಳುವ ಪ್ರಶ್ನೆಗೆ ಇಲ್ಲಿ ಉತ್ತರ ಹೇಳುವುದಕ್ಕೆ ಬರುವುದಿಲ್ಲ. ಹೆಲಿಕಾಪ್ಟರನ್ನು ಉಪಯೋಗಿಸುವ ವಿಚಾರದಲ್ಲಿ ಯಾವ ರೂಲ್ಸ್ ಇದೆಯೆಂದು ಕೇಳಿದ್ದೀರಿ, ಅದಕ್ಕೆ ನಾವು ಉತ್ತರ ಕೊಟ್ಟಿದ್ದೇವೆ. ರೂಲ್ಸ್ ಪ್ರಕಾರವೇ ನಾವು ಖರ್ಚು ಮಾಡಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮುಖ್ಯಮಂತ್ರಿಗಳು ಹೆಲಿಕಾಪ್ಟರ್‌ನಲ್ಲಿ ಪ್ರಯಾಣ ಮಾಡಲು ರೂಲ್ಸ್‌ನಲ್ಲಿ ಇದಿಯೋ ಇಲ್ಲವೋ ಎಂದು ಕೇಳುತ್ತೇನೆ.

ಅಧ್ಯಕ್ಷರು.—ಪ್ರಯಾಣ ಮಾಡುತ್ತಿರುವುದರಿಂದ ರೂಲ್ಸ್‌ನಲ್ಲಿ ಇದೇ ಎಂದೇ ಅರ್ಥ.

ಶ್ರೀ ಎಸ್. ಆರ್. ಬೊಮ್ಮಾಯಿ.—ಹಾಗಾದರೆ ಯಾವ ರೂಲ್ಸ್‌ನಲ್ಲಿ ಬರುತ್ತದೆ. ಯಾವ ರೂಲ್ಸ್ ಕೆಳಗೆ ಪ್ರಯಾಣ ಮಾಡಿದ್ದಾರೆ ಅದನ್ನು ಹೇಳಲಿ ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರು ಈಗ ಪ್ರಶ್ನೆಯನ್ನು ಏನು ಕೇಳಿರುತ್ತಾರೆ. ಅದಕ್ಕೆ ಸೀಮಿತವಾಗಿ ಉತ್ತರವನ್ನು ಕೊಟ್ಟಿರುತ್ತೇವೆ. ನಿರ್ದಿಷ್ಟವಾಗಿ ಯಾವ ರೂಲ್ ಕೆಳಗೆ ಹಣವನ್ನು ಖರ್ಚುಮಾಡಿದ್ದೀರಿ ಎಂದು ಪ್ರತ್ಯೇಕವಾಗಿ ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ಬೇಕಾದರೆ ಉತ್ತರವನ್ನು ಒದಗಿಸಿಕೊಡುತ್ತೇನೆ.

ಶ್ರೀ ಜೆ. ಎಚ್. ಪಟೇಲ್ —ಮಾನ್ಯ ಅಧ್ಯಕ್ಷರೇ ಒಂದು ದಿವಸಕ್ಕೆ ನಾಲ್ಕು ಸಾವಿರ ರೂಪಾಯಿಗಳನ್ನು ಖರ್ಚುಮಾಡತಕ್ಕಂಥ ಮಾನ್ಯ ಮುಖ್ಯ ಮಂತ್ರಿಗಳು ಪ್ರವಾಸಕ್ಕಾಗಿ ಒಳ್ಳೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಒಂದು ದಿವಸಕ್ಕೆ ನಾಲ್ಕು ಸಾವಿರ ರೂಪಾಯಿಗಳನ್ನು ಖರ್ಚುಮಾಡುವುದಲ್ಲದೆ ಟಿ.ಎ. ಬೇರೆ ತೆಗೆದುಕೊಳ್ಳುತ್ತಾರೆಯೇ ಎಂದು ಕೇಳುತ್ತೇನೆ. ಕೆಲವು ಸಂದರ್ಭದಲ್ಲಿ ಕಾರ್‌ನಲ್ಲಿ ಸರ್ಕಾರಿ ಪ್ರಯಾಣ ಮಾಡಿದಾಗಲೂ ಟಿ. ಎ. ಯನ್ನು ತೆಗೆದುಕೊಳ್ಳುತ್ತಾರೆಯೇ ? ಮತ್ತೆ ಮಾನ್ಯ ಮುಖ್ಯ ಮಂತ್ರಿಗಳು ಪ್ರವಾಸ ಹೊರಡುವಾಗ ನಾಲ್ಕು ನಾಲ್ಕು ಜನ ಸೆಕ್ಯೂರಿಟಿಯನ್ನು ತೆಗೆದುಕೊಂಡು ಹೋಗುತ್ತಾರೆ. ಇದರಿಂದಾಗಿ ಅವರಿಗೆ ದಿವಸಕ್ಕೆ ನಾಲ್ಕು ಸಾವಿರ ರೂಪಾಯಿಗಳು ಖರ್ಚು ಮಾಡುವುದರ ಜೊತೆಗೆ ಪ್ರವಾಸ ಟಿ. ಎ. ಎಂದು ಏನಾದರೂ ಕೊಡಬೇಕೇ ಎಂದು ಕೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಉತ್ತರ ಹೇಳಬೇಕಾದರೆ ಅದಕ್ಕೆಲ್ಲ ಲೆಕ್ಕವನ್ನು ತೆಗೆದು ಹೇಳಬೇಕಾಗಿರುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಪ್ರತ್ಯೇಕ ಪ್ರಶ್ನೆಯನ್ನು ಕೇಳಬೇಕೆಂದು ಹೇಳುತ್ತೇನೆ.

Conditions of Roads in U.K. District due to heavy Rains

24 SRI V. M. GHADI (Haliyal).—Will the Minister for Public Works he pleased to state.—

(a) whether it is not a fact that the roads and communications in Karwar District are affected due to heavy rains :

(b) the amount required by the Public Works Department and TDB's for the said repairs.

(c) the amount paid so far.

(d) the reasons for not paying full amount so far ?

SRI KAGODU THIMMAPPA (Minister for Public Works).—

(a) Yes. The roads in Uttar Kannada District are to some extent affected by rains.

(b) (i)	Amount required for P.W.D roads ...	Rs.	16,67,000
(ii)	Amount required for TDB Roads	Rs.	17,46,800
	Total	Rs.	34,13,800